**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *12.06.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ *1* ನೇ ಆರೋಪಿತರ ಪರ ವಕೀಲರಾದ ಶ್ರೀ ಯು.ಎಸ್ ರವರಿಂದಃ**

. ನಾನು ಕಟ್ಟಡ ಕಟ್ಟುವ ಕೆಲಸದ ಉಸ್ತುವಾರಿ ಕೆಲಸವನ್ನು ಮಾಡಿಕೊಂಡಿರುತ್ತೇನೆ. ನನ್ನ ಮನೆ ರಾಮಾನುಜ ರೋಡ್ 12 ನೇ ಕ್ರಾಸ್ ನಲ್ಲಿ ಇರುತ್ತದೆ. ಪ್ರಾಸಾ 1 ರವರ ಮನೆ 9 ನೇ ಕ್ರಾಸ್ ನಲ್ಲಿ ಬರುತ್ತದೆ. ಪ್ರಾಸಾ-3 ರಮೇಶ್ ರವರ ಮನೆ ರಾಘವೇಂದ್ರ ನಗರದಲ್ಲಿ ಇರುತ್ತದೆ. ಪ್ರಾಸಾ-3 ರಮೇಶ್ ನನಗೆ ಸುಮಾರು ವರ್ಷದಿಂದ ಪರಿಚಯ ಸಿದ್ದಾರ್ಥ ನಗರದಲ್ಲಿರುವ ಒಂದು ಮನೆಗೆ ನಾನು ಹೋಗುತ್ತಿದ್ದೆ ಆಗ ಪರಿಚಯವಾಗಿದ್ದರು. ನಾನು ಮತ್ತು ಪ್ರಾಸಾ-1 ಬಾಲ್ಯ ಸ್ನೇಹಿತರು ಇರುತ್ತೇವೆ. ಆರೋಪಿತರು ಎಲ್ಲಿ ವಾಸವಾಗಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ ಮತ್ತು ಅವರುಗಳು ಏನು ಕೆಲಸ ಮಾಡಿಕೊಂಡಿರುತ್ತಾರೆ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

2. ದಿಃ04.10.2020 ರಂದು ಪ್ರಾಸಾ-3 ರಮೇಶ್ ನನ್ನ ಮನೆಗೆ ರಾತ್ರಿ 11 ಗಂಟೆಗೆ ಬಂದಿದ್ದರು. ಆ ರೀತಿ ಬಂದವರು ಮನೆಯಲ್ಲಿ ಅರ್ಧ ಗಂಟೆ ವರೆಗೆ ಇದ್ದರು. ನಂತರ ನಾನು ಮತ್ತು ಪ್ರಾಸಾ-3, ಪ್ರಾಸಾ-1 ರವರ ಹುಟ್ಟುಹಬ್ಬ ಇದುದ್ದರಿಂದ ಪ್ರಾಸಾ-1 ರವರ ಮನೆಗೆ ಹೋಗಿದ್ದೆವು. ಆ ದಿನ ಪ್ರಾಸಾ-1 ರವರ ಮನೆಯಲ್ಲಿ ಹುಟ್ಟುಹಬ್ಬ ಕಾರ್ಯಕ್ರಮ ಇರಲಿಲ್ಲ ಆಗಲೇ ಆಗಿಹೋಗಿತ್ತು. ನಾನು ಮತ್ತು ಪ್ರಾಸಾ-3, ಪ್ರಾಸಾ-1 ರವರ ಮನೆಗೆ ಹೋದಾಗ ರಾತ್ರಿ 11 ಗಂಟೆ 40 ನಿಮಿಷವಾಗಿತ್ತು. ಪ್ರಾಸಾ-1 ರವರ ಹುಟ್ಟುಹಬ್ಬ ಅಕ್ಟೋಬರ್ 1 ನೇ ತಾರೀಖು ಇತ್ತು. ನಾನು ಪ್ರಾಸಾ-1 ರವರ ಹುಟ್ಟುಹಬ್ಬದ ದಿನ ಶುಭಾಶಯ ಕೋರಿದ್ದೆ. ನಾನು ಪೋನ್

ಮುಖಾಂತರ ಶುಭಾಶಯ ಕೋರಿದ್ದೆ. ಪ್ರಾಸಾ–1 ರವರು ಅಕ್ಟೋಬರ್ 1 ನೇ ತಾರೀಖಿನಂದು ಮನೆಯಲ್ಲಿ ಇರಲಿಲ್ಲ. ಪ್ರಾಸಾ–1 ರವರ ಮನೆಯಲ್ಲಿ ಸುಮಾರು ½ ಗಂಟೆ ವರೆಗೆ ಇದ್ದೆವು. ನಾನು ಆ ವೇಳೆಗೆ ಆಗಲೇ ನಮ್ಮ ಮನೆಯಲ್ಲಿ ಊಟ ಮಾಡಿದ್ದೆ. ಪ್ರಾಸಾ–1 ರವರ ಮನೆಯಲ್ಲಿ ಆತನ ತಂದೆ ತಾಯಿ ಇದ್ದರು. ನಾನು, ಪ್ರಾಸಾ–1 ಮತ್ತು ಪ್ರಾಸಾ–3 ಕೂಡಿ ಎಂ.ಜಿ ರೋಡ್ ನಲ್ಲಿರುವ ಮಾರ್ಕೆಟ್ ನ ಹತ್ತಿರ ಇರುವ ಟೀ ಹೊಟೆಲ್ ಗೆ ಟೀ ಕುಡಿಯಲು ಹೋಗಿದ್ದೆವು. ಮಾರ್ಕೆಟ್ ನ ಎದುರುಗಡೆ ಯಾವುದೇ ಟೀ ಅಂಗಡಿಯಾಗಲೀ ಹೋಟೆಲ್ ಆಗಲೀ ಇರುವುದಿಲ್ಲ ಎಂದರೆ ಸರಿ ಆದರೆ ಬೈಕ್ ನಲ್ಲಿ ಒಬ್ಬ ಟೀ ತರುತ್ತಾನೆ. ನನ್ನ ಮನೆಗೆ ಲಕ್ಷ್ಮಿ ಆಸ್ಪತ್ರೆ ಹತ್ತಿರ ಇರುತ್ತದೆ. ಲಕ್ಷ್ಮಿ ಆಸ್ಪತ್ರೆ ಮುಂಭಾಗದಲ್ಲಿ ಟೀ ಅಂಗಡಿ ಇರುತ್ತವೆ ಎಂದರೆ ಸರಿ. ಪ್ರಾಸಾ–1 ರವರ ಮನೆಯಿಂದ ಹೊರಟರೆ 101 ಗಣಪತಿ ದೇವಸ್ಥಾನದ ಹತ್ತಿರ ಟೀ ಅಂಗಡಿ ಹೋಟೆಲ್ ಇರುತ್ತವೆ ಎಂದರೆ ಸರಿ. ಅದೇ ರೀತಿ ಅಗ್ರಹಾರ ಸರ್ಕಲ್ ಗೆ ಬಂದರೆ ಅಲ್ಲಿಯೂ ಸಹ ಟೀ ಅಂಗಡಿ ಹೋಟೆಲ್ ಇರುತ್ತವೆ ಎಂದರೆ ಸರಿ. ಜೆ.ಎಸ್.ಎಸ್ ಆಸ್ಪತ್ರೆ ಎದುರುಗಡೆಯೂ ಸಹ ಟೀ ಅಂಗಡಿ ಹೋಟೆಲ್ ಇರುತ್ತವೆ ಎಂದರೆ ಸರಿ. ನಮ್ಮ ಮನೆಯಿಂದ ಸೀತಾರಂಗ ಆಸ್ಪತ್ರೆ ಕಡೆ ಬಂದರೂ ಸಹ ಟೀ ಅಂಗಡಿ ಹೋಟೆಲ್ ಇರುತ್ತವೆ ಎಂದರೆ ಸರಿ.

3. ಜೆ.ಎಸ್.ಎಸ್ ಆಸ್ಪತ್ರೆ ಎದುರುಗಡೆ ರಾತ್ರಿ ಪೂರ್ತಿ ಟೀ ಅಂಗಡಿಗಳ ತೆರೆದಿರುತ್ತವೆ ಎಂದರೆ ಸರಿ. ನಾವು ಎಂ.ಜಿ.ರೋಡ್ ಮಾರ್ಕೆಟ್ ನ ಎದುರುಗಡೆ ಕಾರ್ ಇದುದ್ದರಿಂದ ಟೀ ಕುಡಿಯುವ ಸಲುವಾಗಿ ಹೋಗಿದ್ದೆವು. ನಾವು ಪ್ರತಿ ದಿವಸ ರಾತ್ರಿ ವೇಳೆಯಲ್ಲಿ ಪಾರ್ಟಿ ಮಾಡುವ ಅಭ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ದಿಃ04.10.2020 ರಂದು ಪ್ರಾಸಾ–1 ರವರ ಹುಟ್ಟುಹಬ್ಬದ ವಿಚಾರದಲ್ಲಿ ಪಾರ್ಟಿ ಮಾಡುವ ಸಲುವಾಗಿ ಇಟ್ಟಿಗೆಗೂಡು ಬಳಿ ಹೋಗಿದ್ದೆವು ಎಂದರೆ ಸರಿಯಲ್ಲ.

ನನಗೆ ಕುಡಿಯುವ ಚಟ ಇದ್ದರು ಸಹ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾವುಗಳು ಪಾರ್ಟಿ ಮಾಡಲು ಹೋಗಿದ್ದರು ಸಹ ಹೋಗಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾವು ಪ್ರಾಸಾ-1 ರವರ ಮನೆಯನ್ನು ಬಿಟ್ಟಾಗ ಮಧ್ಯ ರಾತ್ರಿ 12 ಗಂಟೆ 10 ನಿಮಿಷವಾಗಿತ್ತು. ಪ್ರಾಸಾ-1 ರವರ ಮನೆಯಿಂದ ಎಂ.ಜಿ ರೋಡ್ ಗೆ ಬರಲು 5 ನಿಮಿಷ ಸಾಕಾಗಿತ್ತು. ಎಂ.ಜಿ ರೋಡ್ ನಿಂದ ಎಲ್ಲಾ ಕಡೆಯಿಂದ ತರಕಾರಿಗಳನ್ನು ತಂದು ಅಲ್ಲಿಗೆ ಹಾಕುವುದರಿಂದ ಆ ರಸ್ತೆಯಲ್ಲಿ ತುಂಬಾ ಜನರು ಹಾಗೂ ವಾಹನಗಳು ಇರುತ್ತವೆ ಎಂದರೆ ಸರಿ. ಟೀ ಅಂಗಡಿ ಹತ್ತಿರ ಸುಮಾರು 20 ನಿಮಿಷ ಕೂತಿದ್ದೆವು. ಮಾರ್ಕೆಟ್ ಬ್ರಿಡ್ಜ್ ನಿಂದ ಜೆ.ಎಸ್.ಎಸ್ ಆಸ್ಪತ್ರೆಯ ದೇವಸ್ಥಾನದ ಮುಂಭಾಗದವರೆಗೆ ಮಧ್ಯದಲ್ಲಿ ಬ್ಯಾರಿಕೇಡ್ ಹಾಕಿದ್ದಾರೆ ಎಂದರೆ ಸರಿ. ದೇವಸ್ಥಾನದ ಹತ್ತಿರದಲ್ಲಿ ಮುಳ್ಳು ತಂತಿ ಬೇಲಿ ಮತ್ತು ಜಂಕ್ ಶೀಟ್ ತಗಡುಗಳು ಇರುತ್ತವೆ ಎಂದರೆ ಸರಿ. ಜೆ.ಎಸ್.ಎಸ್ ಆಸ್ಪತ್ರೆಗೆ ರೋಗಿಗಳು ಮತ್ತು ಅವರ ಸಂಬಂಧಿಕರು ಹೋಗಿ ಬರುವುದು ಇರುತ್ತದೆ ಎಂದರೆ ಸರಿ. ಜೆ.ಎಸ್.ಎಸ್ ಆಸ್ಪತ್ರೆಯ ಮುಖ್ಯದ್ವಾರ ರಸ್ತೆಗೆ ಇರುತ್ತದೆ ಎಂದರೆ ಸರಿ. ನಾನು ಕಾರಿನಲ್ಲಿ ಹಿಂಬದಿಯ ಸೀಟ್ ನಲ್ಲಿ ಕುಳಿತುಕೊಂಡಿದ್ದೆ. ಮುಂದಿನ ಸೀಟ್ ಪ್ರಾಸಾ-1 ಮತ್ತು 3 ರವರು ಕುಳಿತುಕೊಂಡಿದ್ದರು. ಪ್ರಾಸಾ-1 ರವರು ಕಾರನ್ನು ಓಡಿಸುತ್ತಿದ್ದರು. ಬ್ರಿಡ್ಜ್ ಅನ್ನು ಬಿಟ್ಟಾಗ ಕಾರಿನ ವೇಗ ಎಷ್ಟು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಜೆ.ಎಸ್.ಎಸ್ ಆಸ್ಪತ್ರೆಯ ಮುಖ್ಯ ದ್ವಾರ ಸಿಗುವ ಪೂರ್ವದಲ್ಲಿಯೇ ಹಿಂದಗಡೆ ರಸ್ತೆಯಲ್ಲಿಯೇ (ಬ್ರಿಡ್ಜ್ ನ ಕಡೆ) ಅಡೆ ತಡೆ ಇರುತ್ತದೆ ಎಂದರೆ ಸರಿ. ಕಾರಿನ ಹಿಂಬದಿಯ ಸೀಟ್ ನಲ್ಲಿ ಕುಳಿತುಕೊಂಡಾಗ ಕಾರಿನ ಮುಂಭಾಗದ್ದು ಕಾಣಿಸುವುದಿಲ್ಲ ಎಂದರೆ ಸರಿ. ಕಾರನ್ನು ಅಡ್ಡ ಹಾಕಿದ್ದರು ಎಂದು ಹೇಳುವ

ಸಮಯದಲ್ಲಿ ಸುಮಾರ 8–10 ಜನ ಇದ್ದರು. ನನಗೆ ಕಾರನ್ನು ಅಡ್ಡ ಹಾಕಿದ್ದರ ಬಗ್ಗೆ ಗೊತ್ತಾಗಲಿಲ್ಲ ಏಕೆಂದರೆ ಆ ಸಮಯದಲ್ಲಿ ನಾನು ನಿದ್ದೆ ಮಾಡುತ್ತಿದ್ದೆ ಶಬ್ದ ಆದ ಮೇಲೆ ಎಚ್ಚರವಾಗಿದ್ದೆ. ಕಾರನ್ನು ನಿಲ್ಲಿಸಿಕೊಂಡಿದ್ದರು ಎಂದು ಹೇಳುವ ಸ್ಥಳದ ಹತ್ತಿರ ಯಾವುದೇ ಬೆಳಕಿನ ವ್ಯವಸ್ಥೆ ಇರಲಿಲ್ಲ ಎಂದರೆ ಸರಿ ಮತ್ತು ಕತ್ತಲು ಇತ್ತು ಎಂದರೆ ಸರಿ. ಯಾವ ಉದ್ದೇಶಕ್ಕೊಸ್ಕರ ಅಲ್ಲಿ ಕಾರನ್ನು ಅಡ್ಡ ಹಾಕಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಕಾರನ್ನು ಇಳಿದಾಗ ಸುಮಾರು 15–20 ಜನ ಸೇರಿದ್ದರು. ನಾನು ಇಳಿದಾಗ ಅಲ್ಲಿ ಸೇರಿದಂತ ಜನರು ಇಲ್ಲಿ ಆಸ್ಪತ್ರೆ ಇರುತ್ತದೆ ಇಷ್ಟು ವೇಗವಾಗಿ ಕಾರುಗಳು ಹೋಗಬಾರದು ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿ. ಆ ದಿನ ಕಾರು ವೇಗವಾಗಿ ಬಂದಿದ್ದರಿಂದ ಆಸ್ಪತ್ರೆಯ ಮುಂದೆ ಇದ್ದಂತ ಜನರು ಕಾರನ್ನು ನಿಲ್ಲಿಸಿದ್ದರು ಎಂದು ನನಗೆ ನಂತರದಲ್ಲಿ ಗೊತ್ತಾಗಿತ್ತು ಎಂದರೆ ಸರಿ. ಫ್ರಾಸಾ–1 ರವರು ಕಾರನ್ನು ಆಸ್ಪತ್ರೆಯ ಮುಂದೆ ವೇಗವಾಗಿ ನಡೆಸಿದ್ದರಿಂದ ಮತ್ತು ಹಂಪ್ಸ್ ಅನ್ನು ವೇಗವಾಗಿ ಹತ್ತಿಸದ್ದರಿಂದ ಕಾರಿನ ಮುಂಭಾಗದಲ್ಲಿ ಕುಳಿತಿದ್ದ ಫ್ರಾಸಾ–1 ಮತ್ತು 3 ರವರು ಕಾರಿನ ವೇಗದ ಕಂಟ್ರೋಲ್ ಸಿಗದೇ ಮುಳ್ಳು ತಂತಿ ಹತ್ತಿರ ಹೋಗಿ ಕಾರ್ ನಿಂತಿದ್ದರಿಂದ ಅವರು ಕೆಳಗೆ ಬಿದಿದ್ದರು ಅದರಿಂದ ಅವರಿಗೆ ಗಾಯಗಳಾಗಿತ್ತು ಎಂದರೆ ಸರಿಯಲ್ಲ. ಫ್ರಾಸಾ–1 ಮತ್ತು 3 ರವರಿಗೆ ಹೇಗೆ ಗಾಯಗಳಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ ಏಕೆಂದರೆ ಆ ವೇಳೆಯಲ್ಲಿ ಕತ್ತಲು ಇತ್ತು. ಆ ಸ್ಥಳದಲ್ಲಿ ಸುಮಾರು 20–30 ನಿಮಿಷದವರೆಗೆ ಇದ್ದೆವು. ನನ್ನ ಬಲ ಕೈ ಬೆರಳಿಗೆ ಗಾಯವಾಗಿತ್ತು ಆದರೆ ಹೇಗೆ ಆಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ.

5. ಅಲ್ಲಿಂದ ನಾವು ಫ್ರಾಸಾ–1 ರವರ ಮನೆಗೆ ಹೋಗಿದ್ದೆವು. ಗಲಾಟೆ ಆಗಿತ್ತು ಎಂದು ಹೇಳುವ ಸ್ಥಳದಿಂದ ಪೋಲೀಸ್ ಠಾಣೆಗೆ ಸುಮಾರು 300–400 ಮೀ ಅಂತರದಲ್ಲಿ ಇತ್ತು ಎಂದರೆ

ಸರಿ. ನಾವು ಆ ದಿನ ಗಲಾಟೆ ಆಗಿತ್ತು ಎಂದು ಹೇಳುವ ಬಗ್ಗೆ ಪೋಲೀಸ್ ಠಾಣೆಗೆ ಹೋಗಿ ದೂರು ಕೊಡಲು ಶರ್ಟ್ ಹರಿದುಹೋಗಿತ್ತು ಮನೆ ಹತ್ತಿರ ಹೋಗಿ ಆ ನಂತರ ದೂರನ್ನು ಕೊಡೋಣ ಎಂದು ಮನೆ ಹತ್ತಿರ ಹೋಗಿದ್ದೆವು. ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗ ಮತ್ತು ಹಳೆಯ ಜೆ.ಎಸ್.ಎಸ್ ಆಸ್ಪತ್ರೆಯ ಮುಂಭಾಗ ಸರ್ಕಲ್ ನಲ್ಲಿ ಪೊಲೀಸರು ಇರುತ್ತಾರೆ ಎಂದರೆ ಸರಿ ನಾವು ಅವರಿಗೆ ವಿಚಾರ ತಿಳಿಸಿರಲಿಲ್ಲ. ಫ್ರಾಸಾ-*1* ರವರಿಗೆ ರಕ್ತ ಬರುವುದು ಜಾಸ್ತಿಯಾಗಿತ್ತು ಆದ್ದರಿಂದ ಸೀತಾರಂಗ ಆಸ್ಪತ್ರೆಗೆ ಹೋಗಿದ್ದೆವು. ಆ ಆಸ್ಪತ್ರೆಯಲ್ಲಿ ಸುಮಾರು ಅರ್ಧ ಗಂಟೆ ಇದ್ದೆವು. ಅದೇ ದಿನ ರಾತ್ರಿ ದೂರನ್ನು ಕೊಟ್ಟಿದ್ದೆವು. ಪೋಲೀಸ್ ಠಾಣೆಗೆ ಹೋದಾಗ ಮುಂಜಾನೆ *2* ಗಂಟೆಯಾಗಿತ್ತು. ಪೋಲೀಸ್ ಠಾಣೆಯಲ್ಲಿ *20-30* ನಿಮಿಷದ ವರೆಗೆ ಇದ್ದೆವು. ಪುನಃ *5* ನೇ ತಾರೀಖು ಮರುದಿನ ಪೋಲೀಸ್ ಠಾಣೆಗೆ ಹೋಗಿದ್ದೆವು. ಮರುದಿನ ಬೆಳಗ್ಗೆ *10* ಗಂಟೆಗೆ ಹೋಗಿದ್ದೆವು. ನಾವು ರಾತ್ರಿ ಹೋದಾಗ ದೂರನ್ನು ಬರೆದುಕೊಟ್ಟಿದ್ದೆವು ಮರುದಿನ ಇನ್ಸ್ ಪೆಕ್ಟರ್ ಬರುತ್ತಾರೆ ಎಂದು ಹೇಳಿದ್ದರು ಮರು ದಿನ ಕೇಸ್ ರಿಜಿಸ್ಟರ್ ಮಾಡಿದ್ದರು. ಮರು ದಿನ ಪೋಲೀಸ್ ಠಾಣೆಗೆ ಹೋಗಿದ್ದೆವು ಅನ್ನುವುದನ್ನು ಹೊರತುಪಡಿಸಿದರೆ ಪುನಃ ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಪೋಲೀಸ್ ಠಾಣೆಯಲ್ಲಿ ನನ್ನ ಸಹಿ ಪಡೆದಿರಲಿಲ್ಲ. ದೂರನ್ನು ಆ ದಿನ ರಾತ್ರಿ ಪೊಲೀಸರೇ ಬರೆದುಕೊಂಡಿದ್ದರು.

*6.* ನಾನು ಈಗ ನಾನು ನೋಡುತ್ತಿರುವ ಮು.ಮಾ-*1* ಹೊಸ ರೇಜ್ ಇರುತ್ತದೆ ಎಂದರೆ ಸರಿ. ನಾನು ಹೋದ ಸಾರಿ ನ್ಯಾಯಾಲಯಕ್ಕೆ ಬಂದಾಗ ಮೊದಲ ಬಾರಿ ಮು.ಮಾ-*1* ಅನ್ನು ನೋಡಿರುತ್ತೇನೆ ಎಂದರೆ ಸರಿ. ನನಗೆ ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತರ ಬಗ್ಗೆ ಗೊತ್ತಿರುವುದಿಲ್ಲ. ನಾವು ರಾತ್ರಿ ಪೋಲೀಸ್ ಠಾಣೆಗೆ ಹೋದಾಗ

ಪೊಲೀಸರು ಅಂಬರೀಷ್ ಎನ್ನುವವನು ಹೊಡೆದಿರುತ್ತಾನೆ ಎಂದು ಹೇಳುತ್ತಿದ್ದರು ಅದೇ ಕಾರಣಕ್ಕೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಅಂಬರೀಷ್ ಹೊಡೆದಿರುತ್ತಾನೆ ಎಂದು ಹೇಳಿದ್ದೇನೆ. ಆ ದಿನ ನಾವು ರಾತ್ರಿ ಪೋಲೀಸ್ ಠಾಣೆಗೆ ಹೋಗಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆ ದಿನ ಮೂರು ಜನ ಕುಡಿದಿದ್ದೆವು ಅದೇ ಕಾರಣಕ್ಕೆ ಆ ದಿನ ರಾತ್ರಿ ಪೋಲೀಸ್ ಠಾಣೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಗಾಯವಾಗಿತ್ತು ಎಂದು ಹೇಳುವ ಗಾಯದ ಬಗ್ಗೆ ಯಾವುದೇ ಚಿಕಿತ್ಸೆ ಪಡೆದುಕೊಂಡಿರಲಿಲ್ಲ. ಆ ದಿನ ಕಾರನ್ನು ನಡೆಸುತಿತದ್ದವರು ಕುಡಿದು ಕಾರನ್ನು ವೇಗವಾಗಿ ಜೆಎಸಎಸ್ ಆಸ್ಪತ್ರೆಯ ಮುಂದಗಡೆ ನಡೆಸಿಕೊಂಡು ಬಂದಿದ್ದರು ಆಸ್ಪತ್ರೆಯ ಮುಂದಗಡೆ ಇದ್ದಂತಹ ಆಟೋದ ಚಾಲಕರು ಮತ್ತು ಅಲ್ಲಿ ಇದ್ದಂತ ಜನರು ಕಾರು ವೇಗವಾಗಿ ಬಂದಿದ್ದನ್ನು ನೋಡಿ ತಡೆದು ಗಲಾಟೆ ಮಾಡಿದ್ದರು ಆ ಗಲಾಟೆಯಲ್ಲಿ ಪ್ರಾಸಾ–*1* ಮತ್ತು *3* ರವರು ಬಿದ್ದು ಗಾಯಗಳಾಗಿದ್ದವು ಎಂದರೆ ಆ ಬಗ್ಗೆ ನನಗೆ ಗೊತ್ತಾಗಲಿಲ್ಲ ಏಕೆಂದರೆ ಕತ್ತಲು ಇತ್ತು. ಭಾನವಿ ಆಸ್ಪತ್ರೆಗೆ ಮರುದಿನ ಪ್ರಾಸಾ–*1* ರವರನ್ನು ಕರೆದುಕೊಂಡು ಮದ್ಯಾಹ್ನ *1* ಗಂಟೆಗೆ ಹೋಗಿದ್ದೆವು. ಆ ಆಸ್ಪತ್ರೆಯಲ್ಲಿ ಪ್ರಾಸಾ–*1* ರವರನ್ನು ದಾಖಲು ಮಾಡಿಕೊಂಡಿದ್ದರು. ಆಸ್ಪತ್ರೆಗೆ ನಾನು, ಪ್ರಾಸಾ–*3*, ಪ್ರಾಸಾ–*1*, ಇತರೆ *4–5* ಜನ ಸೇರಿ ಹೋಗಿದ್ದೆವು. ಪೊಲೀಸರ ಮಾತು ಕೇಳಿ ಆರೋಪಿತರು ಹೊಡೆದಿದ್ದರು ಎಂದು ನ್ಯಾಯಾಲಯದ ಮುಂದೆ ಹೇಳಿದ್ದೆ ಎಂದರೆ ಸರಿ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**